# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1028 (1140) |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 07.03.2022 |
| ಉತ್ತರಿಸುವವರು | : | ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೀಸಲು ಅರಣ್ಯ ಪ್ರದೇಶದಿಂದ 10 ಕಿ.ಮೀ ವ್ಯಾಪ್ತಿಯ ಒಳಗೆ ಸಾಮಿಲ್ಲುಗಳು ಇರಬೇಕೆಂಬ ನಿಯಮವಿದ್ದರೂ 13 ಕಿ.ಮೀ ವ್ಯಾಪ್ತಿಯಷ್ಟು ದೂರದಲ್ಲಿರುವ ಕೃಷ್ಣಾಪುರ ಗ್ರಾಮದಲ್ಲಿ ಸಾಮಿಲ್ಲುಗಳಿಗೆ ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ; (ವಿವರ ನೀಡುವುದು) | ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 163ರನ್ವಯ, ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳಲ್ಲಿ ಈ ಕೆಳಗಿನ ನಾಲ್ಕು ಮರದ ಮಿಲ್ಲುಗಳಿಗೆ ಅನುಮತಿ ನೀಡಲಾಗಿದೆ.<br>1. ಮೆ\|\| ಕಾಳಿಕಾಂಬ ಫರ್ನಿಚರ್ಸ್, ಕೃಷ್ಣಾಪುರ ಕಾಟಿಪಳ್ಳ, ಇದು1989-90ರಲ್ಲಿ ಸ್ಥಾಪನೆಗೊಂಡಿರುತ್ತದೆ.<br>2. ಮೆ\|\|ಆಶಾ ವುಡ್ವರ್ಕ್ಸ್ ಇಂಡಸ್ಟ್ರೀಸ್, ಕೃಷ್ಣಾಪುರ, ಕಾಟಿಪಳ್ಳ ಇದು 1985-86ರಲ್ಲಿ ಸ್ಥಾಪನೆಗೊಂಡಿರುತ್ತದೆ.<br>3. ಮೆ\|\|ಕಾಳಿಕಾಂ<br>4. ಬ ವುಡ್ ಇಂಡಸ್ಟ್ರೀಸ್ & ಫರ್ನಿಚರ್ಸ್, 5ನೇ ಬ್ಲಾಕ್, ಕೃಷ್ಣಾಪುರ, ಕಾಟಿಪಳ್ಳ ಇದು 2002-03ರಲ್ಲಿ ಸ್ಥಾಪನೆಗೊಂಡಿರುತ್ತದೆ.<br>5. ಮೆ\|\|ಎಸ್ಕೆ ಟಿಂಬರ್ಸ್ & ವುಡ್ ಇಂಡಸ್ಟ್ರೀಸ್, ಕಾಟಿಪಳ್ಳ 2000-01ರಲ್ಲಿ ಸ್ಥಾಪನೆಗೊಂಡಿರುತ್ತದೆ. |
| ಆ) | 1975-1980ರ ದಶಕದಲ್ಲೇ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳು ನವಮಂಗಳೂರು ಬಂದರಿನ ವಸತಿ ರಹಿತರಿಗೆ ವಸತಿ ವ್ಯವಸ್ಥೆ ಕಲ್ಪಿಸಲು ಸ್ಥಳವನ್ನು ನಿಗದಿಪಡಿಸಿದ್ದರೂ ಈ ಪ್ರದೇಶದಲ್ಲಿ ಸಾಮಿಲ್ಲುಗಳನ್ನು ಸ್ಥಾಪಿಸಲು ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ; | 1975-1980ರ ದಶಕದಲ್ಲೇ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳಲ್ಲಿ ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 163ರನ್ವಯ ಸಾಮಿಲ್ಲುಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿರುತ್ತದೆ. |
| ಇ) | ಈ ಪ್ರದೇಶದಲ್ಲಿ ಸಾಮಿಲ್ಲುಗಳನ್ನು ಸ್ಥಾಪಿಸಲು ನಿಯಮಬಾಹಿರವಾಗಿ ಅನುಮತಿ ನೀಡಿದ ಮತ್ತು ವರ್ಷಂಪ್ರತಿ ಅನುಮತಿಯನ್ನು ನವೀಕರಿಸುತ್ತಿರುವ ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ; ಈ ಕುರಿತು ಸರಕಾರದ ನಿಲುವೇನು? | ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮ 163ರನ್ವಯ ಸಾಮಿಲ್ಲುಗಳನ್ನು ಸ್ಥಾಪಿಸಲು ಅನುಮತಿ ನೀಡಿರುವುದರಿಂದ, ನಿಯಮ ಬಾಹಿರವಾಗಿ ಯಾವುದೇ ಸಾಮಿಲ್ಲುಗಳನ್ನು ಸ್ಥಾಪಿಸಲು ಅನುಮತಿ ನೀಡಿರುವುದಿಲ್ಲ. |

ಸಂಖ್ಯೆ: ಅಪಜೀ 09 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು